

# ವಿವಿಧ ರಾಷ್ಟ್ರಗಳಲ್ಲಿ ಹೆಲ್ಮೆಟ್

| | |
|---|---|
| ಆಫ್ಘಾನಿಸ್ತಾನ: | ಆರ್ಥಿಕವಾಗಿ ಅಷ್ಟೇನೂ ಸುಸ್ಥಿತಿಯಲ್ಲಿಲ್ಲದ ಈ ರಾಷ್ಟ್ರದಲ್ಲಿ ಮೋಟಾರು ಸೈಕಲ್ ಚಾಲನೆಗೆ ನಿರ್ದಿಷ್ಟ ಕಾನೂನು ಎಂಬುದಿಲ್ಲ. |
| ಅಲ್ಬೇನಿಯಾ: | ಇಲ್ಲಿ ಹೆಲ್ಮೆಟ್ ಧರಿಸಬೇಕು ಎಂಬ ಕಾನೂನಿದೆ. ಆದರೆ ಹೆಲ್ಮೆಟ್ ಬೆಲ್ಟ್ ಅನ್ನು ಕಡ್ಡಾಯವಾಗಿ ಹಾಕಬೇಕು ಎಂಬ ನಿಯಮವಿಲ್ಲ. |
| ಅರ್ಜೆಂಟೀನಿಯಾ: | ಇಲ್ಲಿ ದ್ವಿಚಕ್ರ ವಾಹನ ಸವಾರರು ಹೆಲ್ಮೆಟ್ ಧರಿಸಬೇಕು ಎಂಬ ಕಾನೂನು ಇದೆ. ಆದರೆ ಬೈಕ್‌ನಲ್ಲಿ ಸಂಚರಿಸುವ ಮಕ್ಕಳಿಗೆ ಹೆಲ್ಮೆಟ್ ತೊಡಿಸಬೇಕು ಎಂಬ ಕಟ್ಟುನಿಟ್ಟಿನ ಕಾನೂನು ಇಲ್ಲ. |
| ಆಸ್ಟ್ರೇಲಿಯಾ: | ಹೆಲ್ಮೆಟ್ ಧರಿಸುವುದು ಕಡ್ಡಾಯ. ಹಾಗೆಯೇ ನಿರ್ದಿಷ್ಟ ಗುಣಮಟ್ಟ ಮಾನ್ಯತೆ ಪಡೆದ ಹೆಲ್ಮೆಟ್ ಧರಿಸುವುದು ಕಡ್ಡಾಯ. ಹೆಲ್ಮೆಟ್ ಬೆಲ್ಟ್ ತೊಡುವುದು ಕಡ್ಡಾಯ. ಬೈಕ್‌ನಲ್ಲಿ ಕುಳಿತುಕೊಳ್ಳಲು 8 ವರ್ಷದೊಳಗಿನ ಮಕ್ಕಳಿಗೆ ಅವಕಾಶವಿಲ್ಲ. ಇಲ್ಲಿ ಬೈಕ್ ಚಲಾಯಿಸುವವರಲ್ಲಿ ಶೇ 99ರಷ್ಟು ಸವಾರರು ಹೆಲ್ಮೆಟ್ ಧರಿಸುತ್ತಾರೆ. |
| ಬಾಂಗ್ಲಾದೇಶ: | ಹೆಲ್ಮೆಟ್ ಧರಿಸುವುದು ಕಡ್ಡಾಯ. ಆದರೆ ಬೈಕ್‌ನಲ್ಲಿ ಪ್ರಯಾಣಿಕರಾಗಿ ಸಂಚರಿಸುವ ಮಕ್ಕಳಿಗೆ ಈ ಕಾನೂನು ಕಡ್ಡಾಯವಲ್ಲ. |
| ಬೆಲ್ಜಿಯಂ: | ಬೈಕ್ ಸವಾರರು ಹೆಲ್ಮೆಟ್ ಧರಿಸುವುದು ಕಡ್ಡಾಯ. 8 ವರ್ಷದೊಳಗಿನ ಮಕ್ಕಳು ಬೈಕ್‌ನಲ್ಲಿ ಸಂಚರಿಸುವಂತಿಲ್ಲ. ಈ ರಾಷ್ಟ್ರದಲ್ಲಿ ಶೇ 99ರಿಂದ ಶೇ 100ರಷ್ಟು ಜನ ಹೆಲ್ಮೆಟ್ ಧರಿಸುತ್ತಾರೆ. |
| ಬ್ರೆಜಿಲ್: | ಹೆಲ್ಮೆಟ್ ಧರಿಸಲು ಇಲ್ಲಿ ಕಾನೂನು ಇದೆ. 7 ವರ್ಷದೊಳಗಿನ ಮಕ್ಕಳನ್ನು ಬೈಕ್‌ನಲ್ಲಿ ಕರೆದುಕೊಂಡು ಹೋಗುವಂತಿಲ್ಲ. ಹಾಗೆಯೇ ಇಲ್ಲಿ ಹೆಲ್ಮೆಟ್ ಧರಿಸುವವರ ಸಂಖ್ಯೆ ಶೇ 80ರಿಂದ 83 |
| ಚೀನಾ: | ಹೆಲ್ಮೆಟ್ ಧರಿಸಲು ನಿರ್ದಿಷ್ಟ ಕಾನೂನಿದೆ. 12 ವರ್ಷದೊಳಗಿನ ಮಕ್ಕಳನ್ನು ಬೈಕ್‌ನಲ್ಲಿ ಕರೆದುಕೊಂಡು ಹೋಗುವಂತಿಲ್ಲ. ಹೆಲ್ಮೆಟ್ ಧರಿಸದವರ ಸಂಖ್ಯೆ ಶೇ 20ರಷ್ಟು ಮಾತ್ರ. |
| ಅಮೆರಿಕ: | ಹೆಲ್ಮೆಟ್ ಧರಿಸುವ ಕಾನೂನು ಅಮೆರಿಕದಲ್ಲಿದೆ. ಮಕ್ಕಳನ್ನು ಬೈಕ್‌ನಲ್ಲಿ ಕರೆದುಕೊಂಡು ಹೋಗುವ ವಿಷಯದಲ್ಲಿ ಯಾವುದೇ ನಿರ್ಬಂಧವಿಲ್ಲ. ಆದರೆ ಇಂಥ ಮುಂದುವರಿದ ರಾಷ್ಟ್ರದಲ್ಲಿ ಹೆಲ್ಮೆಟ್ ಧರಿಸುವವರ ಸಂಖ್ಯೆ ಶೇ 68 ಮಾತ್ರ. |

ವಿನ್ಯಾಸಗೊಂಡಿರುತ್ತದೆ. ಆದರೆ, ವಾಹನಗಳ ಸದ್ದು ಕೇಳಿಸಿಯೇ ಕೇಳಿಸುತ್ತದೆ. ರಸ್ತೆಯಲ್ಲಿರುವಾಗ ಒಂದಷ್ಟು ಶಬ್ದಗಳು ಕೇಳಿಸುವುದು ಅಗತ್ಯ ಹಾಗೂ ಅನಿವಾರ್ಯ.

◆ **ಮಿಥ್ಯೆ 3: ಹೆಲ್ಮೆಟ್ ತಲೆಯನ್ನು ಬಿಸಿ ಮಾಡುತ್ತದೆ.**

ಇದು ತಪ್ಪು ಗ್ರಹಿಕೆ. ಹೆಲ್ಮೆಟ್‌ನ ಹೊರಮೈ ಬಿಸಿಯಾಗಬಹುದು. ಆದರೆ ಒಳಗೆ ಫೋಮ್‌ನ ಪದರ ಇರುತ್ತದೆ. ಅದು ಶಾಖನಿರೋಧಕದಂತೆ ಕೆಲಸ ಮಾಡುತ್ತದೆ. ಹೊರಗಿನ ತಾಪಮಾನ ಹೆಚ್ಚಿದ್ದರೂ, ಅದನ್ನು ತಡೆಗಟ್ಟುತ್ತದೆ. ಹೆಲ್ಮೆಟ್‌ನ ಒಳಗೆ ಗಾಳಿ ಬರಲು ಸೂಕ್ತ ವ್ಯವಸ್ಥೆಯಿದೆ; ವಾಹನ ಚಲನೆ ಸಂದರ್ಭದಲ್ಲಿ ಗಾಳಿಯೂ ಒಳಗೆ ಬರಲಿದೆ. ಬಿಸಿಲ ಪ್ರದೇಶ ಮತ್ತು ಕರಾವಳಿ ಪ್ರದೇಶಗಳಲ್ಲಿ, ಟ್ರಾಫಿಕ್ ಜಾಮ್ ಹಾಗೂ ಸುತ್ತಮುತ್ತ ನಿಂತ ಕಾರುಗಳು ಹೊರಸೂಸುವ ಬಿಸಿ ಹೊಗೆಯಿಂದಾಗಿ ಸೆಕೆಯಾಗಿ ಬೆವರು ಬರುವುದು ಸಹಜ. ಇದು ಹೆಲ್ಮೆಟ್‌ನ ದೋಷವಲ್ಲ, ಬದಲಿಗೆ ವಾತಾವರಣದಲ್ಲಿನ ಬದಲಾವಣೆ.

◆ **ಮಿಥ್ಯೆ 4: ನಗರ ಪ್ರದೇಶದಲ್ಲಿ ಹೆಲ್ಮೆಟ್ ಅಗತ್ಯವಿಲ್ಲ.**

ಇದೂ ತಪ್ಪು. ಹಳ್ಳಿ ಅಥವಾ ಹೊರಗೆ ಲಾಂಗ್ ಡ್ರೈವ್‌ಗೆ ಹೋಗುವಾಗ ಹೆಲ್ಮೆಟ್ ಹೇಗೆ ಅಗತ್ಯವೋ ಹಾಗೆಯೇ ನಗರ ಪ್ರದೇಶದಲ್ಲೂ ಹೆಲ್ಮೆಟ್ ಧರಿಸುವುದು ಅಗತ್ಯ. ಪೊಲೀಸರ ಭಯಕ್ಕಾಗಿ ಅಲ್ಲ, ಬದಲಿಗೆ ಇತರ ವಾಹನಗಳಿಂದ

